# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 57/2022

ಸಿಡಬ್ಲ್ಯೂ: 35
ಪಿಡಬ್ಲ್ಯೂ: 11

**ದಿನಾಂಕ: 19-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿದಾರರ ಹೆಸರು : ಶಿವರಾಜ್ ಟಿ.

ತಂದೆಯ ಹೆಸರು : ತಿಪ್ಪೇಸ್ವಾಮಿ

ವಯಸ್ಸು : 33 ವರ್ಷ

ಉದ್ಯೋಗ : ಕಿರಾಣಿ ಅಂಗಡಿ

ವಾಸ ಸ್ಥಳ : ಜಾಲಿಕಟ್ಟೆ

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:**

ನಾನು ಜಾಲಿಕಟ್ಟೆಯಲ್ಲಿ ವಾಸ ಮಾಡುತ್ತಿದ್ದು, ಚಿತ್ರದುರ್ಗದ ಹೊಳಲ್ಕೆರೆ ರಸ್ತೆಯಲ್ಲಿ ಸಂಪಿಗೆಸಿದ್ದೇಶ್ವರ ಶಾಲೆಯ ಪಕ್ಕದಲ್ಲಿ ಸುಮಾರು **8–10** ವರ್ಷದಿಂದ ಶ್ರೀ ಗುರುಸಿದ್ದರಾಮೇಶ್ವರ ಪ್ರಾವಿಜನ್ ಸ್ಟೋರ್ ಹೆಸರಿನಲ್ಲಿ ಕಿರಾಣಿ ಅಂಗಡಿ ನಡೆಸುತ್ತಿದ್ದೇನೆ. ಬಿಸಿಯಲ್ಲಿ ಕಾಣುತ್ತಿರುವ ಆರೋಪಿ ಗೊತ್ತು. ಆತ ನನ್ನ ಅಂಗಡಿಯಲ್ಲಿ ಕೆಲಸಕ್ಕೆ ಇದ್ದ. ಆತನ ತಂಗಿ ನಾರಮ್ಮ ದೊಡ್ಡಸಿದ್ದವ್ವನಹಳ್ಳಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದು, ಮಾಳಪ್ಪನಹಟ್ಟಿಯಿಂದ ಆಟೋದಲ್ಲಿ ಬಂದು ನಮ್ಮ ಕಿರಾಣಿ ಅಂಗಡಿ ಹತ್ತಿರ ಇಳಿದು ಅಲ್ಲಿ ಸ್ವಲ್ಪ ಹೊತ್ತು ಕಾಯ್ದು ಬೇರೆ ಆಟೋ ಹಿಡಿದು ದೊಡ್ಡಸಿದ್ದವ್ವನಹಳ್ಳಿಗೆ ಹೋಗುತ್ತಿದ್ದಳು. ಹಾಗಾಗಿ ಆಕೆಯ ಪರಿಚಯವಾಗಿತ್ತು. ಆಕೆ ತನ್ನ ಅಣ್ಣನಿಗೆ ಯಾವುದೇ ಕೆಲಸ ಇಲ್ಲ ಎಂದು ಹೇಳಿ ಆತನನ್ನು ನನ್ನ ಅಂಗಡಿಯಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳಿ ಎಂದು ಕೇಳಿದ್ದಳು. ನಾನು ಒಪ್ಪಿಕೊಂಡು ತಿಂಗಳಿಗೆ ರೂ.**4000/–** ಸಂಬಳ ಮತ್ತು ದಿನಾಲೂ ಓಡಾಡಲು ರೂ.**100/–**ರಂತೆ ಮಾತನಾಡಿ ಆತನನ್ನು ಸುಮಾರು **2** ವರ್ಷದ ಹಿಂದೆ ಕೆಲಸಕ್ಕೆ ತೆಗೆದುಕೊಂಡಿದ್ದೆ.

**2**. ಕಳೆದ ವರ್ಷ ಅಂದರೆ **2021** ಡಿಸೆಂಬರ್ ನಲ್ಲಿ ಹೊಲದಲ್ಲಿ ಮೆಕ್ಕೆಜೋಳ ಇದೆ ಎಂದು ಅದನ್ನು ಕೂಲಿಯವರನ್ನು ಕರೆದುಕೊಂಡು ಹೋಗಿ ಮುರಿಯಬೇಕಾಗಿದೆ ಎಂದು

ಹೇಳಿ ನನ್ನ ಅಂಗಡಿಗೆ ಕೆಲಸಕ್ಕೆ ಬಂದಿರಲಿಲ್ಲ. ದಿನಾಂಕಃ **27–12–2021** ರಂದು ನನ್ನ ಹತ್ತಿರ ಬಂದು ನನ್ನ ಹೆಂಡತಿಗೆ ಹುಷಾರಿಲ್ಲ ಆಸ್ಪತ್ರೆಗಾಗಿ ರೂ.**2000/–** ಬೇಕಾಗಿದೆ ಎಂದು ಕೇಳಿಕೊಂಡಿದ್ದ. ನಾನು ರೂ.**500/–** ಕೊಟ್ಟು ಅಷ್ಟೇ ಹಣ ಇರುವುದು ಬೇಕಾದರೆ ನಾಳೆ ಬಂದು ತೆಗೆದುಕೊಂಡು ಹೋಗು ಎಂದು ಹೇಳಿ ಕಳುಹಿಸಿದ್ದೆ ಆತ ಆ ರೂ.**500/–** ಪಡೆದು ಬೇರೇನೂ ಮಾತನಾಡದೇ ಗಾಬರಿಯಿಂದ ಹೊರಟುಹೋದ.

**3.** ಅದಾದ **2–3** ದಿನಗಳ ನಂತರ ನಾನು ಆತನಿಗೆ ಫೋನ್ ಮಾಡಿದೆ. ಆದರೆ ಆತ ಕರೆ ಸ್ವೀಕರಿಸಲಿಲ್ಲ. ಆ ನಂತರ ದಿನಾಂಕಃ **08** ಅಥವಾ **9** ಜನವರಿ **2022** ರಲ್ಲಿ ಟಿವಿಯಲ್ಲಿ ಮತ್ತು ದಿನಪತ್ರಿಕೆಗಳಲ್ಲಿ ಬಂದ ಸುದ್ದಿಯನ್ನು ನೋಡಿ ನನಗೆ ಗಾಬರಿಯಾಯಿತು. ಆರೋಪಿ ಹೆಂಡತಿಯನ್ನು ಸಾಯಿಸಿ ಮನೆಯಲ್ಲಿ ಹೂತುಹಾಕಿದ್ದಾನೆಂದು ದಿನಪತ್ರಿಕೆಯಲ್ಲಿ ಮತ್ತು ಟಿವಿ ಮಾಧ್ಯಮದಲ್ಲಿ ನೋಡಿ ಗೊತ್ತಾಯಿತು. ವಿಸಿ ಮೂಲಕ ಆರೋಪಿಯನ್ನು ನೋಡಿ ಗುರುತಿಸುತ್ತಿದ್ದೇನೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಸಿ.ಆರ್. ವಕೀಲರಿಂದಃ**

ಈ ಹಂತದಲ್ಲಿ ಆರೋಪಿ ಪರ ವಕೀಲರು ಎಲ್ಲಾ ಪ್ರಮುಖ ಸಾಕ್ಷಿಗಳ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ಇಲ್ಲದಿದ್ದರೆ ಆರೋಪಿಯ ರಕ್ಷಣೆಗೆ ತೊಂದರೆಯಾಗುವುದು ಎಂದು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಮನಗೂಳಿ ಪ್ರೇಮಾವತಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 57/2022

ಸಿಡಬ್ಲ್ಯೂ: 34
ಪಿಡಬ್ಲ್ಯೂ: 10

**ದಿನಾಂಕಃ 19-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಗದುಗೇಶ |
| ತಂದೆಯ ಹೆಸರು | : ಲಿಂಗಪ್ಪ |
| ವಯಸ್ಸು | : 38 ವರ್ಷ |
| ಉದ್ಯೋಗ | : ಉಕ್ಕಡಗಾತ್ರಿ ದೇವಸ್ಥಾನದಲ್ಲಿ ಮುಡಿ ತೆಗೆಯುವ ಕೆಲಸ |
| ವಾಸ ಸ್ಥಳ | : ಉಕ್ಕಡಗಾತ್ರಿ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಉಕ್ಕಡಗಾತ್ರಿಯಲ್ಲಿ ಶ್ರೀ ಕರಿಬಸವೇಶ್ವರ ದೇವಸ್ಥಾನಲ್ಲಿ ಸುಮಾರು 15 ವರ್ಷದಿಂದ ಮುಡಿ ತೆಗೆಯುವ ಕೆಲಸವನ್ನು ಮಾಡಿಕೊಂಡಿದ್ದೇನೆ. ಈಗ ವಿಸಿ ಮೂಲಕ ಕಾಣುತ್ತಿರುವ ವ್ಯಕ್ತಿಯನ್ನು ನೋಡಿ ಗುರುತಿಸುತ್ತಿದ್ದೇನೆ. ಆತ ಸುಮಾರು 10 ತಿಂಗಳ ಹಿಂದೆ ನಮ್ಮ ಊರಲ್ಲಿರುವ ಶ್ರೀ ಕರಿಬಸವೇಶ್ವರ ದೇವಸ್ಥಾನಕ್ಕೆ ಬಂದಿದ್ದು, ಆತ ತುಂಬಾ ಗಾಬರಿಗೊಂಡಿದ್ದ. ಆತನಿಗೆ ಗಾಬರಿಗೊಳ್ಳಲು ಏನು ಕಾರಣ ಎಂದು ಕೇಳಿದಾಗ ಹೆಂಡತಿಗೆ ಹುಷಾರಿಲ್ಲ ಎಂದು ಅರಕೆ ಹೊತ್ತಿದ್ದೇನೆ ಎಂದು ಕಾರಣ ಮುಡಿ ತೆಗೆಯಬೇಕಾಗಿದೆ ಎಂದು ಹೇಳಿದಾಗ ನಾನು ಆತನ ಮುಡಿ ತೆಗೆದಿದ್ದೆ. ನಾನು ಆತನಿಗೆ ಯಾವ ಊರು ಎಂದು ಕೇಳಿದಾಗ ಆತ ಭರಮಸಾಗರದ ಹತ್ತಿರ ಕೋಣನೂರು ಎಂದು ಹೇಳಿದ್ದ. ಪೊಲೀಸರು ನನ್ನನ್ನು ಭರಮಸಾಗರ ಠಾಣೆಗೆ ಕರೆಸಿದ್ದರು. ಅಲ್ಲಿ ಆರೋಪಿಯನ್ನು ತೋರಿಸಿದ್ದು, ನಾನು ಆತನನ್ನು ನೋಡಿ ಗುರುತಿಸಿದ್ದೆ.

(ಈ ಹಂತದಲ್ಲಿ ಪಿ ಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಸಾಕ್ಷಿಯು ಹೇಳಿಕೆಯಲ್ಲಿನ ವಿಷಯಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಪಾಟೀ ಸವಾಲು

ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

**2.** ದಿನಾಂಕಃ **06–01–2022** ರಂದು ಆರೋಪಿ ಮದ್ಯಾಹ್ನ **12.15** ಗಂಟೆಗೆ ನನ್ನ ಹತ್ತಿರ ಬಂದು ನನ್ನ ಹೆಂಡತಿ ಸತ್ತಿರುತ್ತಾಳೆ ತಲೆ ಕೂದಲು ಮೀಸೆ ಗಡ್ಡ ತೆಗೆಯಬೇಕು ಎಂದು ತಿಳಿಸಿದಾಗ ಆತನ ಬೇಡಿಕೆಯಂತೆ ನಾನು ಕೂದಲು ತೆಗೆದಿದ್ದೆ ಎಂದರೆ ನಿಜ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಸಿ.ಆರ್. ವಕೀಲರಿಂದಃ**

ಈ ಹಂತದಲ್ಲಿ ಆರೋಪಿ ಪರ ವಕೀಲರು ಎಲ್ಲಾ ಪ್ರಮುಖ ಸಾಕ್ಷಿಗಳ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ಇಲ್ಲದಿದ್ದರೆ ಆರೋಪಿಯ ರಕ್ಷಣೆಗೆ ತೊಂದರೆಯಾಗುವುದು ಎಂದು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಮನಗೂಳಿ ಪ್ರೇಮಾವತಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 57/2022

ಸಿಡಬ್ಲ್ಯೂ: 33
ಪಿಡಬ್ಲ್ಯೂ: 09

**ದಿನಾಂಕ: 19-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಶಶಿಧರ |
| ತಂದೆಯ ಹೆಸರು | : ಬಸವಂತಪ್ಪ |
| ವಯಸ್ಸು | : 52 ವರ್ಷ |
| ಉದ್ಯೋಗ | : ಸಿಮೆಂಟ್ ಅಂಗಡಿ |
| ವಾಸ ಸ್ಥಳ | : ಸಿರಿಗೆರೆ |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:**

ಈಗ ವಿ.ಸಿ. ಮೂಲಕ ಕಾಣುವ ವ್ಯಕ್ತಿ ನನಗೆ ಗೊತ್ತು. ನಾನು ಸಿರಿಗೆರೆಯಲ್ಲಿ ಕಾಲೇಜ್ ರಸ್ತೆಯಲ್ಲಿ ಆಸ್ಪತ್ರೆಯ ಎದುರು ಸಿಮೆಂಟಿನ ಅಂಗಡಿ ಇಟ್ಟುಕೊಂಡು **8–10** ವರ್ಷದಿಂದ ವ್ಯಾಪಾರ ಮಾಡಿಕೊಂಡಿದ್ದೇನೆ.

**2.** ಇದೇ ವರ್ಷ ಜನವರಿ ತಿಂಗಳಿನಲ್ಲಿ ಆರೋಪಿ ನನ್ನ ಅಂಗಡಿಗೆ ಬಂದು **5** ಕೆಜಿ ಸಿಮೆಂಟ್ ಬೇಕು ಎಂದು ಕೇಳಿ ಖರೀದಿ ಮಾಡಿಕೊಂಡು ಹೋಗಿದ್ದ. ಆತ ಖರೀದಿ ಮಾಡಿಕೊಂಡು ಹೋದ ನಂತರ ಮಾಧ್ಯಮದ ಮೂಲಕ ಆರೋಪಿ ನಾರಪ್ಪ ಹೆಂಡತಿಯನ್ನು ಕೊಲೆ ಮಾಡಿ ಮನೆಯಲ್ಲಿ ಹೂತುಹಾಕಿ ನನ್ನ ಅಂಗಡಿಯಲ್ಲಿ ಖರೀದಿಸಿದ್ದ ಸಿಮೆಂಟಿನಿಂದ ಕಡಪ ಕಲ್ಲುಗಳನ್ನು ಇಟ್ಟು ಪ್ಯಾಕ್ ಮಾಡಿದ್ದಾನೆಂದು ಗೊತ್ತಾಯಿತು. ಟಿಸಿ ಮತ್ತು ದಿನಪತ್ರಿಕೆಯಲ್ಲಿ ಸುದ್ದಿ ಬರುವುದಕ್ಕಿಂತ **8–10** ದಿನ ಮೊದಲು ಆತ ನನ್ನ ಅಂಗಡಿಯಿಂದ ಸಿಮೆಂಟ್ ಖರೀದಿಸಿದ್ದ. ನನ್ನ ಅಂಗಡಿಯಲ್ಲಿ ಸಿಮೆಂಟ್ ಖರೀದಿಸಿದ್ದ ಆರೋಪಿಯನ್ನು ವಿ.ಸಿ. ಮೂಲಕ ನೋಡಿ ಗುರುತಿಸುತ್ತಿದ್ದೇನೆ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಸಿ.ಆರ್. ವಕೀಲರಿಂದಃ</u>**

ಈ ಹಂತದಲ್ಲಿ ಆರೋಪಿ ಪರ ವಕೀಲರು ಎಲ್ಲಾ ಪ್ರಮುಖ ಸಾಕ್ಷಿಗಳ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ಇಲ್ಲದಿದ್ದರೆ ಆರೋಪಿಯ ರಕ್ಷಣೆಗೆ ತೊಂದರೆಯಾಗುವುದು ಎಂದು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಮನಗೂಳಿ ಪ್ರೇಮಾವತಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 57/2022

ಸಿಡಬ್ಲ್ಯೂ: 31
ಪಿಡಬ್ಲ್ಯೂ: 08

**ದಿನಾಂಕಃ 19-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿದಾರರ ಹೆಸರು : ವಿಶ್ವನಾಥ

ತಂದೆಯ ಹೆಸರು : ಸಣ್ಣ ನಾರಪ್ಪ

ವಯಸ್ಸು : 40 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಕೋಣನೂರು

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ**

ಆರೋಪಿ ನಾರಪ್ಪ ಗೊತ್ತು. ವಿಸಿ ಮೂಲಕ ಆತನನ್ನು ನೋಡಿ ಗುರುತಿಸುತ್ತಿದ್ದೇನೆ. ಆತನ ಹೆಂಡತಿ ಸುಮ. ಅಕೆ ತೀರಿಹೋಗಿದ್ದಾಳೆ. **5–6** ವರ್ಷದ ಹಿಂದೆ ಆರೋಪಿ ಮತ್ತು ಸುಮ ಇವರ ಮದುವೆ ಸಿರಿಗೆರೆ ಮಠದಲ್ಲಿ ಸಾಮೂಹಿಕ ವಿವಾಹದಲ್ಲಿ ನಡೆದಿತ್ತು. ಮದುವೆಯಾದ ನಂತರ ಗಂಡ ಹೆಂಡತಿ ಕೋಣನೂರಿನಲ್ಲಿ ವಾಸ ಮಾಡುತ್ತಿದ್ದರು. ಅವರಿಗೆ ಒಬ್ಬ ಮಗ ಇದ್ದಾನೆ. ಆ ಮನೆಯಲ್ಲಿ ಆರೋಪಿ, ಸುಮ ಮತ್ತು ಮಗು ಮಾತ್ರ ಇರುತ್ತಿದ್ದರು. ಆರೋಪಿ ವ್ಯವಸಾಯ ಮಾಡುತ್ತಿದ್ದ ಮತ್ತು ಚಿತ್ರದುರ್ಗದಲ್ಲಿ ಅಂಗಡಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದ. ಆರೋಪಿ ತನ್ನ ಕೆಲಸದಿಂದ ಬಂದ ದುಡಿಮೆಯನ್ನು ಏನು ಮಾಡುತ್ತಿದ್ದ ನನಗೆ ಗೊತ್ತಿಲ್ಲ. ಗಂಡ ಹೆಂಡತಿಯ ನಡುವೆ ಒಂದು ಸಲ ಗಲಾಟೆಯಾಗಿದ್ದನ್ನು ನಾನು ನೋಡಿದ್ದೆನು. ಸುಮ ನನ್ನ ಹತ್ತಿರ ಯಾವುದೇ ವಿಷಯವನ್ನು ಹೇಳಿರಲಿಲ್ಲ.

**2.** ಸುಮ ಕಾಣೆಯಾಗಿದ್ದಾಳೆಂದು ಊರಲ್ಲಿ ಮಾತನಾಡಿಕೊಳ್ಳುತ್ತಿದ್ದರು. ನಂತರ ಆಕೆಯ ತಂದೆ ಬಂದರು. ಈ ವರ್ಷ ಜನವರಿ **2–3** ನೇ ತಾರೀಖಿಗೆ ಆಕೆ

ಕಾಣೆಯಾಗಿದ್ದಾಳೆಂದು ಗೊತ್ತಾಗಿತ್ತು. ಸುಮಾಳ ತಂದೆ ಬಂದಿದ್ದರು. ಆರೋಪಿ ಅವರ ಜೊತೆ ಇದ್ದ. ಇಬ್ಬರೂ ಸೇರಿ ಆಕೆ ಕಾಣೆಯಾಗಿದ್ದಾಳೆಂದು ದೂರು ಕೊಡುತ್ತೇವೆಂದು ಹೋಗಿದ್ದರು. ಆ ನಂತರ ಆರೋಪಿ ಕಾಣೆಯಾದ.

**3.** ದಿನಾಂಕಃ **06–01–2022** ರಂದು ಆಕೆಯ ತಂದೆ ಬಂದರು. ಆರೋಪಿಯ ಮನೆಯ ಬೀಗ ತೆಗೆದು ಪರಿಶೀಲಿಸಿದ್ದರು. ಆರೋಪಿಯ ಮನೆಯಿಂದ ವಾಸನೆ ಬರುತ್ತಿದೆ ಎಂದು ಹೇಳಿದರು. ಅವರು ಪೊಲೀಸ್ ಠಾಣೆಗೆ ಹೋದರು.

**4.** ಮರು ದಿನ ಪೊಲೀಸರು ಆರೋಪಿಯ ಮನೆಗೆ ಬಂದರು. ಆರೋಪಿಯ ಮನೆ ಒಳಗೆ ಸುಮಾಳ ಶವ ಹೂತಿದ್ದು ಅದನ್ನು ಅಗೆದು ಹೊರತೆಗೆದರು. ಆ ಶವವನ್ನು ಅಲ್ಲಿ ಯಾರು ಹೂತಿಟ್ಟಿದ್ದರು ನನಗೆ ಗೊತ್ತಿಲ್ಲ. ನಾನು ಸುಮಾಳ ಶವವನ್ನು ನೋಡಿದ್ದೆ. ಶವದ ಮೈಮೇಲಿನ ಬಟ್ಟೆಯಿಂದ ಅದು ಸುಮಾಳ ಶವ ಎಂದು ಗುರ್ತಿಸಿದ್ದೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಸಿ.ಆರ್. ವಕೀಲರಿಂದಃ**

ಈ ಹಂತದಲ್ಲಿ ಆರೋಪಿ ಪರ ವಕೀಲರು ಎಲ್ಲಾ ಪ್ರಮುಖ ಸಾಕ್ಷಿಗಳ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ಇಲ್ಲದಿದ್ದರೆ ಆರೋಪಿಯ ರಕ್ಷಣೆಗೆ ತೊಂದರೆಯಾಗುವುದು ಎಂದು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಮನಗೂಳಿ ಪ್ರೇಮಾವತಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.